ಮಾಡಿರ ದೇವ್ರಿಗೆ ನಾನ್ಯಾಕೆ ಮುಗಿಯಾನ ಅಂತ ಇಬ್ರು ಬೇರೆಬೇರೆ ಗುಡಿ ಕಟ್ಕಂಡ್ರು. ನಡ್ಲು ಮನೇವು ಎಲ್ಲೂ ಕಡಿಕೋಗಿ ಮಂಗ್ಳಾರ್ತಿ ಮಾಡುಸ್ಕೊಂಡು ಬರವು. ಒಂದಿನ ಅವುಕ್ಕೂ ಬೇಜಾರಾತೇನೋ, ಅವ್ರ ಮನೆ ಮುಂದೆ ನಿಂತಿದ್ನಲ್ಲಾ ನನ್ಗೆ ಒಂದು ಕಟ್ಟೆ ಕಟ್ಟಿ, ಕೆಳಗೊಂದು ಕಲ್ಲಿಟ್ಟು ಪೂಜೆ ಮಾಡಕೆ ಶುರುಮಾಡಿವು. ವರ್ಷಕ್ಕೆ ಒಂದಾದ್ರೂ ಜಾತ್ರೆ, ಪರು ಮಾಡ್ತಿದ್ರೋ ನೆನ್ಪಿಲ್ಲ. ಈಗ ಮೂರ್ ಮೂರ್ಸಾರಿ ಮಾಡ್ತಾವೆ. ಕಾಂಪಿಟೇಶನ್ ಮೇಲೆ ಜನ ಕರ್ಸಿ, ಚೆನ್ನಾಗಿ ತಿನ್ಸಿ ಕುಡ್ಸಿ ಒಡೆದಾಡಿ, ಕೊನೆಗೆ ಪಟಾಕಿ ತಕ್ಕಂಡು ಬೆಂಕೀನೂ ಅಚ್ಕಂತಾವೆ.

ಆವಾಗೆಲ್ಲಾ ಗುಡ್ಡಗಾಡು ನೆಲ್ಸಮ ಮಾಡಿ ಉಟ್ಟಿರೋ ಮಕ್ಳಿಗೇ, ಬೆಳೀತಿರೋ ಹಳ್ಳಿಗೇ ಮನೆ, ಜಮೀನು, ಅಂಗ್ಡಿ, ಗುಡಿ ಅಂತ ಜಾಗ ಮಾಡ್ಕಳರು. ಯಾವ್ದುಕ್ಕು ಲೆಕ್ಕಿಲ್ಲ, ಪತ್ರಿಲ್ಲ. ಬೇಕಾದಂಗೆ ದಾನ-ಧರ್ಮಾನು ಮಾಡಾರು. ಯಾವಾಗ್ಲೋ ಒಂದ್ಸಾರಿ ಅದೆಂತದೋ ಮಾರಿ ಅಂತ ಕಾಯ್ಲೆ ಬಂತಲ್ಲ, ಅಂಗಾದಾಗೆಲ್ಲ ಊರೂರ್ನೆ ಅಂಗೇ ಬಿಟ್ಬಿಟ್ಟು ನಮ್ಮುನ್ನೂ ದಾಟಿ ನಮ್ಮ ದೂರದ ಸಂಬಂಧಿಕ್ರು ಇದ್ದಿದ್ದ ಕಾಡಿಗೆಲ್ಲಾ ಓಗಿ, ಎಲ್ಡು ಮೂರು ತಿಂಗ್ಳು ಇದ್ದು ಬರರು. ಅಷ್ಟು ತಿಂಗ್ಳಲ್ಲಿ ಎಷ್ಟಾಗುತ್ತೋ ಅಷ್ಟು ನಾಶ ಮಾಡಿರರು. ಎಷ್ಟು ಆಳ್ಮಾಡಿರೂ ಏಳರಿಲ್ಲಾ, ಕೇಳರಿಲ್ಲ. ಆದ್ರೆ ಈಗ್ನೋಡಿ, ಎಡ್ಗಡೆ ಮನವು ಬೆಳ್ದಿರೂ ಈರೆ ಕಾಯಿ ಗಿಡುದ ಬಳ್ಳಿ ಬಲ್ಗಡೆ ಮನೆ ಮೇಲೆ ಅಬ್ಬೀತೆ ಅಂತ ಜಗ್ಳ. ಅಂತದ್ರಲ್ಲಿ ಎಲ್ಲೂ ಮನೇವು ಚನಾಗಿದ್ದಾಗ ಬಲ್ಗಡೆ ಮನೇವು ತಮ್ಗೆ ಅಂತ ಮಾಡ್ಕಂಡಿದ್ದ ಜಾಗಾನ ಎಡ್ಗಡೆ ಮನೇವ್ಕೆ ಕೊಟ್ಟಿದ್ವಂತೆ. ಎಡ್ಗಡೆ ಮನೇವ್ರೋ ದಡ್ನನ್ನ ಮಗ್ನವು, ಬೆವ್ರು ಅರ್ಸವು ಅಷ್ಟೇ. ಯಾಪಾರ-ಗೀಪಾರ ಮಾಡಿ ದುಡ್ಡು, ಚಿನ್ನ, ಬೆಳ್ಳಿ ಅಂತ ಮಾಡ್ಕಳ್ಳಾಕು ಬತೀರ್ಲಿಲ್ಲ, ಬಲ್ಗಡೆ ಮನೇದೆ ವ್ಯವಾರ. ಕೊಟ್ಟಷ್ಟುನ ಇಸ್ಕಂಡು ಇರವು. ನಡ್ಲು ಮನೇವು ಇಂಗಾದಾಗ ಬಲ್ಗಡೆ ಮನೇವುನ್ನ ಕರ್ದು ಇಂಗೆಲ್ಲ ಮಾಡ್ಬಾರ್ದು ಅಂತ ಬುದ್ದಿ ಏಳ್ದೆ, ಆಗದೆಲ್ಲ ಗೊತ್ತಾದ್ರು ಬಾಯಿ ಮುಚ್ಕಂಡು ಇರವು. ಜಗ್ಳ ಆದಾಗೆಲ್ಲಾ ನಡ್ಲು ಮನೇಲೆ ಪಂಚಾತ್ಗಿ ನೆಡಿಯದು. ಆಗ್ಲೂ ಈ ನಡ್ಲು ಮನೆ ಯಾರಿಗೂ ನಿಂದೇ ತಪ್ಪು ಅಂತ ಕಡ್ಡಿ ಮುರ್ದಂಗೆ ಏಳ್ತಾನೇ ಇರ್ಲಿಲ್ಲ. ಈ ಎಲ್ಡು ಮನೆ ಎಣ್ಣು-ಗಂಡು ಸೇರಿ ಆಗಿರ ಸಂಸಾರ ಬೇರೆ ಇತ್ತಲ್ಲ, ಅಂಗಾಗಿ ಎಂಗೆ ಏಳಕೂ ಬತಿರ್ಲಿಲ್ಲ ಅನ್ನಿ.



ಎಡ್ಗಡೆ ಮನೇವು ಕೆಲ್ಸ ಮಾಡ್ಕೊಡ್ತಿದ್ದುಕ್ಕೆ ಬಲ್ಗಡೆ ಮನೇವು ಏನು ಕೊಟ್ರು ಕಮ್ಮೀನೆ. ಅಂತದ್ರಲ್ಲಿ ಯಾವಾಗ್ಲೋ ಕೊಟ್ಟಿದ್ದು ವಸಿ ತುಂಡು ಜಾಗಕ್ಕೇ ಈಗ ಕ್ಯಾತೆ ತಕ್ಕಂಡು ಕೂತವೆ. ಅದ್ಯಾವಾಗ್ ಕೊಟ್ಟಿದ್ದು ಅಂತ್ಲೂ ನೆನ್ಪಿಲ್ಲ. ಕಾಗ್ದ-ಪತ್ರ ಅಂತ್ಲೂ ಏನೂ ಮಾಡ್ಕಂಡಿಲ್ಲ. ಎಲ್ಲಾ ಬಾಯ್ಮಾತಲ್ಲೇ ಆಗಿದ್ದು. ಆದ್ರೂ ಈಗ ಬಲ್ಗಡೆ ಮನೇವು ಕಾಗ್ದ ತಂದಾವೆ, ಅದ್ರಾಗೆ ಇಷ್ಟು ವರ್ಷದ್ವರ್ಗೂ ಈ ಜಾಗ ನಿಂಗೆ ಆಮೇಲೆ ನಂಗೆ ಅಂತ ಈತಂತೆ. ಅದೆಂಗಾದಾತು ಏಳಿ? ನಾ ನೋಡ್ದಂಗೆ ಈ ಕಾಗ್ದ-ಪತ್ರ ಅನ್ನದೇನು ಗೊತ್ತೇ ಇರ್ಲಿಲ್ಲ. ಈಗ ಅದೆಂಗ ಉದ್ಭವ ಮಾಡ್ಕಂಡು ಬಂದವೆ. ಅದ್ಕೆಯಾ ಏಳಿದ್ದು, ಈ ಬಲ್ಗಡೆ ಮನೇವ್ಕೆ ತಲೆ ಜಾಸ್ತಿ ಅಂತ. ಈಗ ಎಡ್ಗಡೆ ಮನೇವು ಏನು ಕಮ್ಮಿಯಿಲ್ಲ, ಅವೂ ಸ್ವಲ್ಪ ತಲೆ ಓಡುಸ್ಕೊಂಡು ಈ ಜಾಗ ಪರ್ಮನೆಂಟಾಗಿ ನಮ್ದೆಯ ಅಂತ ಒಂದು ಕಾಗ್ದ ತಂದವೆ. ಅದ್ರಾಗೆ ಈಗ ಬಲ್ಗಡೆ ಮನೇವು ಸುಮ್ನೆ ಕೂತವಾ? ಕುಂತ್ರು, ನಿಂತ್ರು, ಮಂಕಂಡ್ರೂ ಜಾಗ ಎಂಗಾರ ವಾಪ್ಸು ತಗಬೇಕು ಅನ್ನದೇ ಯೋಚ್ನೆ. ಅವುಕ್ಕೇನ್ ಜಾಗ ಕಮ್ಮಿಯಿಲ್ಲ. ಆದ್ರೂ ಈಗ್ಯಾಕಿಂಗೆ ಆಡ್ತ್ಯಾರು ಅಂತೀರ? ಅದ್ಕೂ ಒಂದು ಕತೆ ಈತೆ ಕೇಳಿ. ಎಡ್ಗಡೆ ಮನೇವು ಮಾರಮ್ಮ, ಕೆಂಪಮ್ಮ ಅಂತ ಎಣ್ಣು ದೇವ್ರುಗಳೀಗೆ ಜಾಸ್ತಿ ಪೂಜೆ ಮಾಡವು. ಬೀದಿ ಬದೀಲೆ ಅವುಕ್ಕೆ ನಾಕು ಗೋಡೆ ಕಟ್ಟೀರೆ ಅವು ಕಲ್ಲಂಗೋ, ಕಟ್ಗೆಯಂಗೋ, ಮಣ್ಣಂಗೋ ದೇವ್ರಾಗಿ ಕುತ್ಕಂಡು ಬಿಡವು. ಕುರೀನೋ ಕೋಳೀನೋ ಕಡ್ಕಂಡು ಮಾರಮ್ಮನ ಎಸ್ರಲ್ಲಿ ಚನ್ನಾಗಿ ತಿನ್ನವು. ಈಗ ಅವುಕ್ಕೂ ಏನ ಆಗಿ ನಾವು ಒಂದು ದೊಡ್ಡು ಗುಡಿ ಕಟ್ಟಾನ ಅನ್ಸೀತಂತೆ. ಅದ್ಕೆ ಇದೇ ಜಾಗ ಆಗ್ಬೇಕು ಅನ್ಕಂಡು ಬಿಟ್ಟೋರೆ. ಈ ಬಲ್ಗಡೇವುಕ್ಕೆ ಉರಿ, ನಮ್ಮ ಜಾಗ್ದಲ್ಲಿ ಅವ್ರ ದೇವ್ರು ಮಾಡ್ತಾರಲ್ಲ ಅಂತ. ಅದ್ಕೆ ಏನೇನ ತಲೆ ಓಡುಸ್ತಾವೆ. ಯಾವ್ದು ಸರಿ ಆಗಂಗಿಲ್ಲ. ಈಗ ಅದ್ಕೆ ಏನ ಐನಾತಿ ಯೋಚ್ನೆ ಬಂದಿರಂಗೀತೆ. ಹಾಂ! ನೋಡಿ ಏನ ಪಂಚಾತ್ತಿಗೆ ಬಂದೇ ಬಿಟ್ರು, ಎಲ್ಡು ಮನೇಲಿಂದ್ಲ ಜನ ಬಂದು ನಡ್ಲು ಮನೇಲಿ ಸೇರ್ತಾವೆ. ಅಲ್ಲಿ ಯಾರೋ ಚಾಪೆ ಆಸ್ತಾವ್ರೆ. ಇವತ್ತದೇನ್ ಆಗ್ಬಿಡುತ್ತೋ